# ಕರ್ನಾಟಕ ಸರ್ಕಾರ

ಸಂಖ್ಯೆ:ಆ.ಇ.8.ಜಿ.ಪ.ಅ.2004

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:16/17-9.2004.

ಇಂದ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ
ಪ್ರಧಾನ ಕಾರ್ಯದರ್ಶಿಗಳು,
ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ,
ಬೆಂಗಳೂರು.560 001.

ಇವರಿಗೆ:
1. ಎಲ್ಲಾ ಜಿಲ್ಲಾ ಪಂಚಾಯತ್‌ನ
   ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು
2. ಎಲ್ಲಾ ಜಿಲ್ಲಾ ಉಪ ನಿರ್ದೇಶಕರು,
   ಸಾರ್ವಜನಿಕ ಶಿಕ್ಷಣ ಇಲಾಖೆ.

ಮಾನ್ಯರೆ,

ವಿಷಯ: ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಅನುದಾನಿತ ಶಾಲೆಗಳ ಶಿಕ್ಷಕರಿಗೆ ತಡೆಹಿಡಿದಿರುವ ವೇತನ ಬಿಡುಗಡೆ ಬಗ್ಗೆ.

ಉಲ್ಲೇಖ:1. ಸರ್ಕಾರದ ಆದೇಶ ಸಂ: ಆ.ಇ.8 ಜಿಪಅ 2004, ದಿನಾಂಕ:7.4.2004
2. ಪತ್ರ ಸಂ: ಆಇ 1282 ವೆಚ್ಚ 6 2004 ದಿನಾಂಕ:18.8.2004.

---

ಸರ್ಕಾರದ ಆದೇಶ ಸಂ: ಆ.ಇ.8 ಜಿಪಅ 2004, ದಿನಾಂಕ:7.4.2004ರಲ್ಲಿ ಶಿಕ್ಷಣ ಇಲಾಖೆ ಲೆಕ್ಕ ಶೀರ್ಷಿಕೆ 2202 ಯೋಜನೆ :ಯೋಜನೇತರ ಅಡಿಯಲ್ಲಿ ಶಿಕ್ಷಕರ ವೇತನಕ್ಕಾಗಿ ಎರಡು ತಿಂಗಳ ಅನುದಾನ ಒಟ್ಟು ರೂ.41731.20 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಉಲ್ಲೇಖ(1) ರ ಆದೇಶದಲ್ಲಿ ವೇತನ ಪಾವತಿ ಕುರಿತು ಸದರಿ ಆದೇಶದಲ್ಲಿ ಕೆಲವು ಷರತ್ತುಗಳನ್ನು ವಿಧಿಸಲಾಗಿತ್ತು. ಸದರಿ ಆದೇಶದಲ್ಲಿ ಸೂಚಿಸಿರುವ ಷರತ್ತುಗಳನ್ನು ಸರ್ಕಾರವು ಹಿಂತೆಗೆದುಕೊಂಡಿದ್ದು, ಜಿಲ್ಲಾ ಪಂಚಾಯತಿಗಳಲ್ಲಿ ಜನವರಿ 2004 ಕ್ಕೆ ಅನುಮೋದನೆಯಾದ ಅನುದಾನಿತ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಕರುಗಳಿಗೆ ತಡೆಹಿಡಿದಿರುವ ವೇತನವನ್ನು ವಿತರಿಸುವ ಅವಶ್ಯಕತೆ ಇದೆ.

ಉಲ್ಲೇಖ(2) ರ ಮೂಲಕ ಬ್ಯಾಕ್‌ಲಾಗ್ ಹುದ್ದೆಗಳಿಗೆ ನೇಮಕಗೊಂಡ 649 ಶಿಕ್ಷಕರುಗಳ ವೇತನವನ್ನು ಬಿಡುಗಡೆ ಮಾಡಲು ಸೂಚಿಸಿರುವ ಹಿನ್ನೆಲೆಯಲ್ಲಿ ಇದೇ ರೀತಿ ಎಲ್ಲಾ ಜಿಲ್ಲಾ ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಉಳಿಕೆ 1350 ಅನುದಾನಿತ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಕರುಗಳಿಗೆ ದಿನಾಂಕ:7.4.2004 ರಲ್ಲಿನ ಆದೇಶದಲ್ಲಿ ಬಿಡುಗಡೆಯಾಗಿರುವ ಅನುದಾನ ಹಾಗೂ ಮಾಸಿಕವಾಗಿ ಈವರೆಗೂ ಬಿಡುಗಡೆ ಮಾಡಿರುವ ಅನುದಾನದಲ್ಲಿ ವೇತನವನ್ನು ಈ ಕೂಡಲೇ ಬಿಡುಗಡೆ ಮಾಡುವಂತೆ ಆದೇಶಿಸಲಾಗಿದೆ.

ತಮ್ಮ ನಂಬುಗೆಯ,
ಸಹಿ/-
(ಎಂ.ಬಸವರಾಜು)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ.

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು**

ಸಂಖ್ಯೆ: ಸಿ8(5) ಶಾಶಿಅ.ಆನಿ-ವೇತನ-42/2004-2005 ದಿನಾಂಕ: 29.9.2004

**ಜ್ಞಾಪನಾ**

ಮೇಲ್ಕಂಡ ಆರ್ಥಿಕ ಇಲಾಖಾ ಸಚಿವಾಲಯದ ಪತ್ರ ಸಂ:ಆ.ಇ.8 ಜಿ.ಪ.ಅ.2004 ದಿನಾಂಕ: 16/17.9.2004 ರ ಪತ್ರವನ್ನು ಮಾಹಿತಿಗೆ ಹಾಗೂ ಮುಂದಿನ ಕ್ರಮಕ್ಕಾಗಿ ರವಾನಿಸಿದೆ.

ನಿರ್ದೇಶಕರು(ಪ್ರೌಢ ಶಿಕ್ಷಣ)

ಗೆ:

1) ಅಪರ ಆಯುಕ್ತರು, ಸಾ.ಶಿ.ಇ., ಧಾರವಾಡ.
2) ಅಪರ ಆಯುಕ್ತರು, ಸಾ.ಶಿ.ಇ., ಗುಲ್ಬರ್ಗಾ
3) ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಸಹ ನಿರ್ದೇಶಕರು, ಸಾ.ಶಿ.ಇ., ಬೆಂಗಳೂರು/ ಮೈಸೂರು/ಗುಲ್ಬರ್ಗಾ/ಬೆಳಗಾಂ.
4) ರಾಜ್ಯದ ಎಲ್ಲಾ ಉಪನಿರ್ದೇಶಕರುಗಳಿಗೆ.
5) ಕಛೇರಿ ಪ್ರತಿ.

E:\Hema\vetana.doc